ಇ–ಮೇಲ್ obccell@uni-mysore.ac.in
ದೂರವಾಣಿ ಸಂಖ್ಯೆ. 0821-2419 906

# ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)
(ಎನ್‌ಐಆರ್‌ಎಫ್–2024: ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ, ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

**ಹಿಂದುಳಿದ ವರ್ಗಗಳ ಘಟಕ ಕಛೇರಿ**
**ಸೆನೆಟ್ ಭವನ, ಮಾನಸಗಂಗೋತ್ರಿ**
**ಮೈಸೂರು–570 006**

**ಸಂಖ್ಯೆ.ಹಿವಘ/ಜಿಎಲ್.1/267/2024–25** **ದಿನಾಂಕ: 05.02.2025**

## ಅಧಿಸೂಚನೆ

ವಿಷಯ: ಮೈಸೂರು ವಿಶ್ವವಿದ್ಯಾನಿಲಯದ ಹಿಂದುಳಿದ ವರ್ಗಗಳ ಘಟಕದ ವತಿಯಿಂದ 2024–25ನೇ ಸಾಲಿನ ಅರ್ಹ 20 ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾಥಿಗಳಿಗೆ ಶಿಷ್ಯವೇತನ ನೀಡಲು ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

ಮೈಸೂರು ವಿಶ್ವವಿದ್ಯಾನಿಲಯದ ಹಿಂದುಳಿದ ವರ್ಗಗಳ ಘಟಕದ ವತಿಯಿಂದ ಯುಜಿಸಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ. ನಿಯಮಾವಳಿಗಳ ಪ್ರಕಾರ ಸಂಶೋಧನಾ ಕಾರ್ಯವನ್ನು ನಿರ್ವಹಿಸುವ ಸಂಶೋಧನ ವಿದ್ಯಾರ್ಥಿಗಳಿಗೆ **ಶಿಷ್ಯವೇತನ ನೀಡುವ ಸಲುವಾಗಿ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಯಲ್ಲಿ ಶೇ. 55ಕ್ಕಿಂತ ಹೆಚ್ಚು ಅಂಕ** ಪಡೆದಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ 2024–25ನೇ ಸಾಲಿನ 20 ಸಂಶೋಧನಾ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 20,000/–ಗಳಂತೆ 03 ವರ್ಷದ ಅವಧಿಗೆ ಆಯ್ಕೆ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

**ಅರ್ಜಿ ಶುಲ್ಕ ರೂ. 200/–(ಇನ್ನೂರು ರೂಪಾಯಿಗಳು ಮಾತ್ರ) ಗಳನ್ನು ಮೈಸೂರು ವಿಶ್ವವಿದ್ಯಾನಿಲಯ ಖಾತೆ ಸಂಖ್ಯೆ : 54007591471 ಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕ್ರಾಫರ್ಡ್ ಭವನ ಆವರಣ ಶಾಖೆಯಲ್ಲಿ** ಜಮಾ ಮಾಡಿರುವ ಮೂಲ ಚಲನ್ ಅನ್ನು ಅರ್ಜಿಯ ಜೊತೆಗೆ ಲಗತ್ತಿಸಿ, **ಸಂಯೋಜನಾಧಿಕಾರಿಗಳು, ಹಿಂದುಳಿದ ವರ್ಗಗಳ ಘಟಕ, ಸೆನೆಟ್ ಭವನ, ಮಾನಸಗಂಗೋತ್ರಿ ಮೈಸೂರು** ಕಛೇರಿಗೆ ಸಲ್ಲಿಸಬೇಕು. ನಿಗಧಿತ ನಮೂನೆಯ ಅರ್ಜಿಗಳನ್ನು **ದಿನಾಂಕ: 05.02.2025** ರಿಂದ **24.02.2025 ರವರೆಗೆ** ಸಮಯ: 10.00 ರಿಂದ 5.30 ರವರೆಗೆ ಕಛೇರಿ ವೇಳೆಯಲ್ಲಿ ಅರ್ಜಿಗಳನ್ನು ಪಡೆಯಬಹುದಾಗಿದೆ ಹಾಗೂ ಭರ್ತಿ ಮಾಡಿರುವ ಅರ್ಜಿಗಳನ್ನು **ದಿನಾಂಕ: 24.02.2025ರ** ಸಂಜೆ 5.30 ಗಂಟೆಯೊಳಗೆ ಹಿಂದುಳಿದ ವರ್ಗಗಳ ಘಟಕದ ಕಛೇರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

**ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕರ್ನಾಟಕ ರಾಜ್ಯದವರಾಗಿದ್ದು, ಮೈಸೂರು ವಿಶ್ವವಿದ್ಯಾನಿಲಯದಿಂದ (ಸ್ವಾಯತ್ತ ಸಂಸ್ಥೆಗಳನ್ನು ಹೊರತುಪಡಿಸಿ) ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು.ಅಪೂರ್ಣಗೊಂಡ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

1. **ವಯೋಮಿತಿ:** 23 ವರ್ಷ ಕನಿಷ್ಟ ವಯಸ್ಸು ಹಾಗೂ 35 ವರ್ಷ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.
2. **ಜಾತಿ ಮತ್ತು ಆದಾಯ ಪ್ರಮಾಣ ಪತ್ರ:**
   ವಿದ್ಯಾರ್ಥಿ ಮತ್ತು ಕುಟುಂಬದ ಒಟ್ಟು ವಾರ್ಷಿಕ ಆದಾಯಮಿತಿ ಕೆಳಕಂಡಂತಿರಬೇಕು.
   a. Category-I: ರೂ.4.50 ಲಕ್ಷಗಳು ಹಾಗೂ Category-II(A), II(B), III(A) and III(B): ರೂ.3.50 ಲಕ್ಷಗಳು ವಾರ್ಷಿಕ ಆದಾಯವನ್ನು ಮೀರಿರಬಾರದು.
   b. ಆದಾಯ ಮತ್ತು ಜಾತಿ ಪ್ರಮಾಣ ಪತ್ರವು ಅಧಿಸೂಚನೆ ಹೊರಡಿಸಿದ ದಿನಾಂಕದಲ್ಲಿ ಚಾಲ್ತಿಯಲ್ಲಿರಬೇಕು (Valid Income & Caste Certificate)
3. **ಅರ್ಜಿಯ ಜೊತೆ ಸಲ್ಲಿಸಬೇಕಾದ ದಾಖಲಾತಿಗಳು:**

a. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯದ ನೇರ ಅಧೀನಕ್ಕೊಳಪಟ್ಟಿರಬೇಕು.
(ಮಾನಸ ಗಂಗೋತ್ರಿ ಮತ್ತು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಮಾತ್ರ ಸಂಶೋಧನೆ ಮಾಡುತ್ತಿರಬೇಕು)

b. ಶುಲ್ಕ ಪಾವತಿಸಿದ ಮೂಲ ಚಲನ್.

c. ಪಿಹೆಚ್.ಡಿ. ತಾತ್ಕಾಲಿಕ ನೋಂದಣಿ ಪತ್ರ ಅಧಿಸೂಚನೆಯ ಹೊರಡಿಸಿದ ದಿನಾಂಕದ ಹಿಂದಿನ 3 ವರ್ಷದೊಳಗಿರಬೇಕು.

d. ಎಲ್ಲಾ ಅಂಕಪಟ್ಟಿಗಳ ಪ್ರತಿಗಳು–ಎಸ್.ಎಸ್.ಎಲ್.ಸಿ ಯಿಂದ ಸ್ನಾತಕೋತ್ತರ ಪದವಿಯವರೆಗೆ ನೀಡುವುದು.

e. ಆಧಾರ್ ಕಾರ್ಡ್.

f. ಶಿಷ್ಯವೇತನಕ್ಕೆ ಆಯ್ಕೆಯಾದ ಸಂಶೋಧನಾ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ ಷರತ್ತುಗಳಿಗೆ ಬದ್ದರಾಗಿರಬೇಕು.

ಈ ಮೇಲಿನ ಎಲ್ಲಾ ದಾಖಲಾತಿಗಳನ್ನು ಮಾರ್ಗದರ್ಶಕರು ಅಥವಾ ಸಂಸ್ಥೆಯ/ವಿಭಾಗದ ಮುಖ್ಯಸ್ಥರಿಂದ ದೃಢೀಕರಿಸಿರಬೇಕು.

ಭರ್ತಿ ಮಾಡಿದ ಅರ್ಜಿಯನ್ನು ನಿಗಧಿಪಡಿಸಿದ ದಾಖಲೆಗಳೊಂದಿಗೆ ಮಾರ್ಗದರ್ಶಕರು ಹಾಗೂ ವಿಭಾಗದ ಅಧ್ಯಕ್ಷರು/ನಿರ್ದೇಶಕರು/ಪ್ರಾಂಶುಪಾಲರ ಮುಖಾಂತರ **"ಸಂಯೋಜನಾಧಿಕಾರಿಗಳು, ಹಿಂದುಳಿದ ವರ್ಗಗಳ ಘಟಕ"** ಕ್ಕೆ ಸಲ್ಲಿಸತಕ್ಕದ್ದು.

ಕುಲಸಚಿವ.

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಗೆ,

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ವಾರ್ತಾ ಭವನ, ಮೈಸೂರು ಜಿಲ್ಲೆ, ಮೈಸೂರು.
2. ನಿರ್ದೇಶಕರು, ಆಕಾಶವಾಣಿ ಕೇಂದ್ರ, ಮೈಸೂರು – ಈ ಪ್ರಕಟಣೆಯನ್ನು ಉಚಿತವಾಗಿ ನಿಮ್ಮ ನಿಲಯದಿಂದ ಭಿತ್ತರಿಸಬೇಕೆಂದು ಕೋರಲಾಗಿದೆ.
3. ಸಂಯೋಜಕರು, ರೇಡಿಯೋ ಮಾನಸ, ಮಾನಸಗಂಗೋತ್ರಿ, ಮೈಸೂರು – ಈ ಪ್ರಕಟಣೆಯನ್ನು ಭಿತ್ತರಿಸಬೇಕೆಂದು ಕೋರಲಾಗಿದೆ.
4. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಮಾನಸಗಂಗೋತ್ರಿ, ಮೈಸೂರು.
5. ಪ್ರಾಂಶುಪಾಲರು, ಮಹಾರಾಜ/ಯುವರಾಜ/ಸಂಜೆ ಕಾಲೇಜು/ಲಲಿತ ಕಲಾ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಆಡಳಿತಾಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.
7. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
8. ಸಂಯೋಜಕರು, ಸಂಶೋಧನಾ ನಿರ್ದೇಶನಾಲಯ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಮಾನ್ಯ ಕುಲಪತಿಯವರ/ಕುಲಸಚಿವರ/ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.
10. ಕಛೇರಿ ಪ್ರತಿ.